ವಯಸ್ಸಿನವಳಾಗಿದ್ದಳು. ನನ್ನ ಅಮ್ಮನಿಗೆ ಅವರ ಪರಿವಾರದ ಪರಿಚಯವಿರಲಿಲ್ಲ. ನಾವು ಅವರ ಎರಡು ಮನೆಗಳ ಪಕ್ಕದಲ್ಲಿದ್ದಾಗ್ಯೂ ಆ ಮನೆಯ ಮಧ್ಯದ ಹುಡುಗ ದೀಪಕ್ ಮಿಶ್ರಾನ ವಿವಾಹವಾದಾಗ, ಅವರು ನಮಗೆ ಆಹ್ವಾನ ಪತ್ರಿಕೆಯನ್ನು ಕಳುಹಿಸಿರಲಿಲ್ಲ. ನಾನು ದೀಪಕ್ ಮಿಶ್ರಾನನ್ನು ಅನೇಕ ಬಾರಿ ನೋಡಿದ್ದೆ. ಅವನು ಟಾಮ್ ಕ್ರೂಸ್‌ನಂತೆ, ಅಮೆರಿಕದ ಬಾಯ್‌ನಂತಿರುತ್ತಿದ್ದ. ಅವನ ಜೊತೆಗಿದ್ದ ಹುಡುಗಿಯರು ಅವನಿಗಾಗಿ ಜೀವ ಕೊಡುತ್ತಿರಬೇಕು. ನಾನು ಸಹ ನನ್ನ ಮನೆಯ ಛಾವಣಿಯಲ್ಲಿ ನಿಂತು ಅವನನ್ನು ನೋಡುತ್ತಿದ್ದೆ. ಅವನೂ ನನ್ನನ್ನು ನೋಡಲಿ ಎಂದು ಬಯಸುತ್ತಿದ್ದೆ, ಆದರೆ ನಾನು ಒಬ್ಬ ಸಾಮಾನ್ಯ ನಡವಳಿಕೆಯ ಹುಡುಗಿಯಾಗಿದ್ದೆ, ಅವನೇಕೆ ನನ್ನನ್ನು ನೋಡುತ್ತಾನೆ? 'ಸಿಸ್ಟರ್' ಸ್ಟೈಲಿನ ಹುಡುಗಿಯರಿಂದ ಅವನಿಗೇನೂ ಆಗಬೇಕಿರಲಿಲ್ಲ. ನಾನು ಆ ದಿನಗಳಲ್ಲಿ 'ಸಿಸ್ಟರ್' ಸ್ಟೈಲಿನ ಹುಡುಗಿಯಾಗಿದ್ದೆ, ಸಿಂಪಲ್ ಆಗಿರದಿದ್ದಾಗ್ಯೂ, ಬೆಡಗುಬಿನ್ನಾಣಗಳಿಂದ ದೂರವಿದ್ದೆ.

ಅದೊಂದು ದಿನ ನೆರೆಮನೆ ಅವರೊಂದಿಗಿನ ಮಾತುಕತೆಯ ಮಧ್ಯೆ, ಅವನ ವಿವಾಹವಾಯಿತು ಎಂಬ ವಿಷಯ ತಿಳಿಯಿತು. ನನಗೆ ಕೇಳಿ ದುಃಖವಾಯಿತು. ನಾನು ಅವನೊಂದಿಗೆ ವಿವಾಹದ ಅಥವಾ ಪ್ರೀತಿಯ ಕನಸನ್ನು ಕಾಣುತ್ತಿರಲಿಲ್ಲ, ಆದಾಗ್ಯೂ ನನಗೆ, ಇಂಥ ಯುವಕರು ವಿವಾಹದ ಬಂಧನದಲ್ಲಿ ಬಂಧಿಸಲ್ಪಡಬಾರದು, ಇದರಿಂದ ಅನೇಕ ಹುಡುಗಿಯರ ಮನಸ್ಸಿಗೆ ಪೆಟ್ಟಾಗುತ್ತದೆ ಎಂದು ಅನ್ನಿಸಿತು.

ದೀಪಕ್ ಮಿಶ್ರಾನ ನವವಿವಾಹಿತೆಯನ್ನು ನಾನು ನೋಡಿದ್ದೆ. ಅವಳು ಸಾಮಾನ್ಯವಾಗಿ ಬಟ್ಟೆ ಒಣಗಿಸಲು ಛಾವಣಿಗೆ ಬರುತ್ತಿದ್ದಳು. ಅವಳು ಸಹ ತುಂಬಾ ಸುಂದರಿಯಾಗಿದ್ದಳು. ಅವಳು ದುಂಡು ಮುಖ, ಅರಳಿದ ಬಿಳಿ ಬಣ್ಣ ಮತ್ತು ಮಧ್ಯಮ ನಿಲುವು ಹೊಂದಿದ್ದಳು. ಅವಳನ್ನು ನೋಡಿದಾಗ ದೀಪಕ್ ಮತ್ತು ಅವಳ ಜೋಡಿ ಸೂಕ್ತವಾಗಿದೆ ಎಂದು ಅನ್ನಿಸುತ್ತಿತ್ತು. ವಿವಾಹವಾದ ಒಂದು ವಾರದ ನಂತರ ಅವಳು ಛಾವಣಿಗೆ ಬಟ್ಟೆ ಒಣಗಿಸಲು ಬರಲಾರಂಭಿಸಿದಳು. ನವವಧು ಕೆಲಸ ಮಾಡುತ್ತಿದ್ದಾಳೆ! ನನಗೆ ಆಶ್ಚರ್ಯವಾಯಿತು. ಇದಾದ ಎರಡು ದಿನಗಳಾದ ನಂತರ ಅವಳು ಬಟ್ಟೆ ಒಣಗಿಸುವಾಗ ಕುಂಟುತ್ತಿರುವಂತೆ ಕಂಡಿತು. ಕಾಲಿಗೆ ಏನೋ ಪೆಟ್ಟಾಗಿರಬೇಕೆಂದು ನಾನು ಯೋಚಿಸಿದೆ. ತದನಂತರದಲ್ಲಿ ಅವಳು ಛಾವಣಿಯಲ್ಲಿ ನನಗೆಂದೂ ಕಾಣಬರಲಿಲ್ಲ. ಅವಳನ್ನು ಛಾವಣಿಯಲ್ಲಿ ನೋಡುವುದು ನನಗೆ ಅಭ್ಯಾಸವಾಗಿತ್ತು. ಅನೇಕ ದಿನಗಳವರೆಗೆ ಅವಳನ್ನು ನೋಡದಿದ್ದಾಗ, ಅವಳು ತನ್ನ ತವರಿಗೆ ಹೋಗಿರಬೇಕೆಂದು ಯೋಚಿಸಿದೆ. ನಂತರ ನನ್ನ ಗಮನ ಅವಳಿಂದ ದೂರವಾಗಿ, ನನ್ನ ವಿದ್ಯಾಭ್ಯಾಸ ಮತ್ತು ಇನ್ನಿತರ ಚಟುವಟಿಕೆಗಳ ಬಗ್ಗೆ ಕೇಂದ್ರೀಕೃತಗೊಂಡಿತು.

ಸುಮಾರು ಎರಡು ತಿಂಗಳ ನಂತರ ಅದೊಂದು ದಿನ ನಾನು ಕಾಲೇಜಿನಿಂದ ಮನೆಗೆ ಬಂದಿದ್ದೆ; ಅಂದು ಸಂಜೆ ದೀಪಕ್ ಮಿಶ್ರಾನ ಮನೆಯ ಎದುರು ಒಂದು ಪೊಲೀಸ್ ಜೀಪ್ ನಿಂತಿತ್ತು. ಮನೆಯಿಂದ ರೋದಿಸುವ ಧ್ವನಿಗಳು ಕೇಳಿ ಬರುತ್ತಿದ್ದವು.

'ಏನಾಗಿದೆ? ಪೊಲೀಸರು ಏಕೆ ಬಂದಿದ್ದಾರೆ? ಕಳ್ಳತನವೇನಾದರು ಆಗಿದೆಯೇ?' ನಾನು ಪಕ್ಕದ ಮನೆಯ ಮೆಂಹದೀರತ್ತಾ ಆಂಟಿಯವರನ್ನು ಕೇಳಿದೆ.

'ಅವರ ಮನೆಗೆ ಯಾರು ಕನ್ನ ಹಾಕ್ತಾರೆ? ಅವರೇ ಖುದ್ದು ಕಳ್ಳರು, ಲೂಟಿಕೋರರು' ಮೆಂಹದೀರತ್ತಾ ಆಂಟಿಯವರು ಬೇಸರದಿಂದ ಹೇಳಿದರು.

'ಆಂಟಿ, ನನಗೆ ಅರ್ಥವಾಗಲಿಲ್ಲ. ಪೊಲೀಸರು ಏಕೆ ಬಂದಿದ್ದಾರೆ?' ಮತ್ತೆ ಕೇಳಿದೆ.

'ಅವರು ತಮ್ಮ ಸೊಸೆಯನ್ನು ಸುಟ್ಟು ಕೊಂದಿದ್ದಾರೆ.'

'ಯಾವ ಸೊಸೆ?'

'ಈಚೆಗಷ್ಟೇ ಮದುವೆಯಾಗಿತ್ತಲ್ಲ, ಅವರ ಮಧ್ಯದ ಹುಡುಗ ದೀಪಕ್‌ನ ಹೆಂಡತಿಯನ್ನು...'

ನನ್ನೆದುರು ಕೂಡಲೇ ದೀಪಕ್‌ನ ಹೆಂಡತಿಯ ಮುಖ ಮೂಡಿತು. ಅಂಥ ಸುಂದರ ಯುವತಿಯನ್ನು ಯಾರು ಹೇಗೆ ಸುಟ್ಟು ಕೊಲ್ಲಲು ಸಾಧ್ಯ? ನನ್ನ ಮನಸ್ಸು ಇದನ್ನು ಒಪ್ಪಲು ಸಿದ್ಧವಿರಲಿಲ್ಲ.

'ಅವಳು ತನ್ನ ತವರಿಗೆ ಹೋಗಿದ್ದಳಲ್ಲ' ಎಂದೆ ನಾನು.

'ಅವಳು ತವರಿಗೆ ಹೋಗಿದ್ದಳೆಂದು ಯಾರು ಹೇಳಿದ್ರು?' ಮೆಂಹದೀರತ್ತಾ ಆಂಟಿ ನನ್ನನ್ನೇ ಕೇಳಿದರು.

'ಯಾರೂ ಹೇಳಲಿಲ್ಲ, ಆದ್ರೆ ಅವಳು ತುಂಬಾ ದಿನಗಳಿಂದ ಛಾವಣಿಯಲ್ಲಿ ಕಾಣಿಸಲಿಲ್ಲವಲ್ಲ, ಅದಕ್ಕೇ ನಾನು ಹೀಗೆಂದು ಯೋಚಿಸಿದೆ...'

'ಆ ಪಾಪಿಗಳು ಅವಳನ್ನು ಕೋಣೆಯಲ್ಲಿ ಕೂಡಿ ಹಾಕಿದ್ದರು... ವರದಕ್ಷಿಣೆಯ ಪಿಶಾಚಿಗಳು, ಆ ಮುದ್ದು ಹುಡುಗಿಯನ್ನು ಕೊಂದು ತಿಂದರು', ಮೆಂಹದೀರತ್ತಾ ಆಂಟಿ ಭಾವಾವೇಶದಲ್ಲಿ ಹೇಳಿದರು. ಅಷ್ಟರಲ್ಲಿ ಅಲ್ಲಿಗೆ ಅರ್ಚನಾ ಅತ್ತಿಗೆ ಸಹ ಬಂದಿದ್ದರು. ಅವರ ಮನೆ ರಸ್ತೆಯ ಆಚೆಗಿತ್ತು. ಅಮ್ಮನಿಗೆ ಅವರೊಂದಿಗೆ ಉತ್ತಮ ಒಡನಾಟವಿತ್ತು.

'ಆ ಜನ ಎಷ್ಟು ನೀಚರು' ಅರ್ಚನಾ ಅತ್ತಿಗೆ ಮೆಂಹದೀರತ್ತಾ ಅತ್ತಿಗೆಗೆ ಹೇಳಿದರು.

'ನೀವು ಅವಳನ್ನು ನೋಡಿದಿರ?' ಮೆಂಹದೀರತ್ತಾ ಆಂಟಿ ಅರ್ಚನಾ ಅತ್ತಿಗೆಯನ್ನು ಕೇಳಿದರು.

'ಹೂಂ, ನೋಡಿದೆ. ನನಗೆ ಇನ್ನು ಕೆಲವು ದಿನ ನಿದ್ರೆಯೇ ಬರಲ್ಲ. ಒಂದು ಪರ್ಸೆಂಟ್ ಸಹ ಬಿಟ್ಟಿಲ್ಲ, ಇಡೀ ಶರೀರವನ್ನು ಸುಟ್ಟಿದ್ದಾರೆ, ಜೀವಂತವಾಗಿ ಸುಟ್ಟಿದ್ದಾರೆ', ಅರ್ಚನಾ ಅತ್ತಿಗೆ ಕಂಪಿಸುವ ಸ್ವರದಲ್ಲಿ ಹೇಳಿದರು.

'ಅವಳು ಓಡೋಡಿ ಹೋಗಿ ಜೀವ ಉಳಿಸಿಕೊಳ್ಳುವ ಪ್ರಯತ್ನವನ್ನು ಸಹ ಮಾಡಿದ್ದಳು, ಅದಕ್ಕೇ ಎಲ್ಲರಿಗೂ ವಿಷಯ ತಿಳಿಯಿತು. ಇಲ್ಲದಿದ್ರೆ ಅವರು ಯಾರಿಗೂ ತಿಳಿಯದಂತೆ ಈ ವಿಷಯ ಮುಚ್ಚಿ ಹಾಕ್ತಿದ್ದರು', ಎಂದರು ಮೆಂಹದೀರತ್ತಾ ಆಂಟಿ.

'ಅವರು ಈಗಲೂ ಅವಳು ಆತ್ಮಹತ್ಯೆಯನ್ನು ಮಾಡಿಕೊಂಡಳು ಎಂದೇ ಹೇಳ್ತಿದ್ದಾರೆ' ಅರ್ಚನಾ ಅತ್ತಿಗೆ ಹೇಳಿದರು.

'ವಾಹ್! ಅವಳೇಕೆ ಆತ್ಮಹತ್ಯೆ ಮಾಡಿಕೊಳ್ತಾಳೆ...? ಇನ್ನೂ ಹೊಸದಾಗಿ ಮದುವೆಯಾದವಳು...ಆ ನೀಚರು ಸುಳ್ಳು ಹೇಳ್ತಿದ್ದಾರೆ' ಮೆಂಹದೀರತ್ತಾ ಆಂಟಿ ಸಿಟ್ಟಿನಿಂದ ಹೇಳಿದರು.

'ಅವಳ ಇಚ್ಛೆಗೆ ವಿರುದ್ಧವಾಗಿ ಅವಳ ತಂದೆ ತಾಯಿ ಮದುವೆ ಮಾಡಿದ್ದರಂತೆ. ತವರಿನಲ್ಲಿ ಅವಳು ಇನ್ಯಾರನ್ನೋ ಪ್ರೀತಿಸುತ್ತಿದ್ದಳಂತೆ, ಅದಕ್ಕೇ...' ಅರ್ಚನಾ ಅತ್ತಿಗೆ ಹೇಳಿದರು.

'ಅವರನ್ನು ಬೆತ್ತಲೆ ಮಾಡಿ ಸರ್ಕಲ್‌ನಲ್ಲಿ ಉಲ್ಟಾ ನೇತು ಹಾಕಬೇಕು. ಮೊದಲನೆಯದಾಗಿ ಆ ಮುಗ್ಧೆಯನ್ನು ಸುಟ್ಟು ಕೊಂದರು, ಅಲ್ಲದೆ ಅವಳ ಚಾರಿತ್ರ್ಯದ ಬಗ್ಗೆ ಕೆಸರು ಎರಚುತ್ತಿದ್ದಾರೆ. ಎಲ್ಲರೂ ಮುಂದೆ ಅನುಭವಿಸ್ತಾರೆ, ಖಂಡಿತ ಅನುಭವಿಸ್ತಾರೆ...' ಮೆಂಹದೀರತ್ತಾ ಆಂಟಿ ಶಾಪ ಹಾಕುವವರಂತೆ ಹೇಳಿದರು.

ಶಾಪ ಹಾಕುವಂಥ ವಿಷಯವೇ ಆಗಿತ್ತು. ರೊಟ್ಟಿಗಳನ್ನು ಬೇಯಿಸುವಾಗ ರೊಟ್ಟಿಯ ಹಬೆ ಮಾತ್ರದಿಂದಲೇ ಬೆರಳುಗಳು ಸುಡುತ್ತವೆ, ಹೀಗಿರುವಾಗ ಇಡೀ ಶರೀರವನ್ನೇ ಸುಡುವ ವಿಷಯ ಕೇಳಿ ನಾನು ಭಯದಿಂದ ಕಂಪಿಸಿದೆ. ನಾನು ನನ್ನ ಮನೆಗೆ ಬಂದೆ. ಅಮ್ಮ ಬರುವವರೆಗೆ ಮೌನಿಯಾಗಿ ಕೂತಿದ್ದೆ. ಅಮ್ಮ ಕಚೇರಿಯಿಂದ ಬಂದಾಗ ಅವರಿಗೂ ಹೊರಗಿನ ಘಟನೆಯ ಸಂಪೂರ್ಣ ಮಾಹಿತಿ ಸಿಕ್ಕಿತು. ಅದುವರೆಗೆ ಅರ್ಚನಾ ಅತ್ತಿಗೆ ಮತ್ತು ಮೆಂಹದೀರತ್ತಾ ಆಂಟಿ ನಮ್ಮ ಮನೆಯ ಎದುರೇ ನಿಂತು ಮಾತನಾಡುತ್ತಿದ್ದರು. ಮನೆಯೊಳಗೆ ಬಂದಾಗ ಅಮ್ಮ ನನ್ನ ಸ್ಥಿತಿಯನ್ನು ನೋಡಿ, ನಾನು ಘಟನೆಯ ಬಗ್ಗೆ ಕೇಳಿ ಹೆದರಿದ್ದೇನೆ ಎಂದು ತಿಳಿದರು. ಅವರು ನನಗೆ ಸಮಾಧಾನ ಮಾಡಿದರು, ತಿಳಿ ಹೇಳಿದರು.

ಅರ್ಚನಾ ಅತ್ತಿಗೆಯ ಕನಸಿನಲ್ಲಿ ಪಲ್ಲವಿ ಮಿಶ್ರಾ ಬಂದಳೋ, ಇಲ್ಲವೋ ತಿಳಿಯದು; ಆದರೆ ನಾನು ಅನೇಕ ರಾತ್ರಿ, ನನ್ನ ಕನಸಿನಲ್ಲಿ ಅವಳನ್ನು ನೋಡಿದೆ; ಒಮ್ಮೆ ಅವಳ ಸುಂದರ ಮುಖ ಬಂದರೆ, ಇನ್ನೊಮ್ಮೆ ಬೆಂಕಿಯಿಂದ ಆವರಿಸಲ್ಪಟ್ಟ ಆ ಸುಂದರ ಮುಖ ಹಾಗೂ ಬೆಂಕಿ ಹೊತ್ತಿದ್ದ ಚೀರಾಡುವ ಅವಳ ಶರೀರವನ್ನು ಕನಸಿನಲ್ಲಿ ನೋಡುತ್ತಿದ್ದೆ.

